**2ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ,**

**ನ್ಯಾಯಾಧೀಶರವರ ನ್ಯಾಯಾಲಯ , ಚನ್ನಗಿರಿ .**

**ಅಸಲು ದಾವಾ ನಂ. 79/16**

**ಡಿ ಡಬ್ಲ್ಯೂ :3**

ಸಾಕ್ಷಿಯನ್ನು ದಿನಾಂಕಃ  17-08-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲು ವಾದಿ ಪರ ವಕೀಲರಾದ ಶ್ರೀ  ಕೆ.ಜಿ.ಎಸ್ ರವರಿಂದಃ**

ಕ್ರಯದ ಕರಾರು ಪತ್ರದ ಪ್ರಕಾರ ನೋಂದಣಿ ಕ್ರಯ ಪತ್ರವನ್ನು ಮಾಡಿಕೊಡುವಂತೆ ಕೋರಿ ಯಾವುದೇ ದಾವೆಯನ್ನು ನಾನು ಸಲ್ಲಿಸಿರುವುದಿಲ್ಲ. ನಿಡಿ 5 ನ್ನು ನಾನೇ ಸೃಷ್ಟಿಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ 5 ಸೃಷ್ಟಿ ಮಾಡಿಕೊಂಡ ಪತ್ರ ಆಗಿರುವುದರಿಂದ ನಾನು ಅದನ್ನು ನಿಗಧಿತ ಸಮಯದಲ್ಲಿ ನೋಂದಾವಣಿ ಮಾಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಿಡಿ 5 ಕ್ರಯದ ಕರಾರು ಪತ್ರವನ್ನು ಬರೆದ ದಿನಾಂಕದಿಂದ ನನ್ನ ಗಮನಕ್ಕೆ ಇರುತ್ತದೆ ಎಂದರೆ ಸರಿ . ರಸೂಲ್ ಖಾನ್ ರವರ ಮಗ ಖಾದರ್ ಖಾನ್ ರವರು ದಾವಾ ಆಸ್ತಿಯು ನಮ್ಮ ತಂದೆ ಖರೀದಿ ಮಾಡಿದ ಆಸ್ತಿ ಎಂದು ನನ್ನನ್ನು ಮತ್ತು ನನ್ನ ತಂದೆಯನ್ನು ಕೇಳಿದ್ದಾರೆ ಎಂದರೆ ಸರಿಯಲ್ಲ .  ಪಂಚಾಯಿತಿದಾರರ ಜೊತೆ ಶಾಮೀಲಾಗಿ ನಮ್ಮ ಹೆಸರಿಗೆ ಯಾವುದೇ ಮಾಲೀಕತ್ವದ ದಾಖಲೆಗಳನು ಇಲ್ಲದೇ ಇದ್ದರೂ ನಿಡಿ 6 ರಿಂದ 36 ರವುಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಡಿ 37 ರ ಮುದ್ರಬಾಯಿ  ಪ್ರಕರಣದಲ್ಲಿ ವಾದಿಯು ಪಕ್ಷಗಾರನಲ್ಲ ಎಂದರೆ ಸರಿ . ಸದರಿ ಪ್ರಕರಣವನ್ನು ಖಾನೆ ಶುಮಾರಿ ಸಂಃ 9 ರ ವಿಚಾರವಾಗಿ ದಾಖಲು ಮಾಡಲಾಗಿತ್ತು ಎಂದರೆ ಸರಿ . ನಾನು ಪಂಚಾಯಿತಿ ದಾಖಲೆಗಳನ್ನು ಆಧರಿಸಿ ಕರೀಂ ಸಾಬ್ ರವರ ಹೆಸರಿಗೆ ಕೆಇಬಿ ಯಿಂದ ಸರ್ವೀಸ್ ಸರ್ಟಿಫಿಕೇಟನ್ನು ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಮಗೆ ಮೂಲ ಮಾಲೀಕತ್ವದ ಪತ್ರಗಳು ಇಲ್ಲದೇ ಇದ್ದರೂ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಈಗಲೂ ಸಹ ವಾದಿಯ ಸ್ವಾಧೀನಾನುಭದಲ್ಲಿ ಇದೆ ಎಂದರೆ ಸರಿಯಲ್ಲ. ನಾನು ಸೃಷ್ಟಿ ಮಾಡಿಕೊಂಡಿರುವ ಸುಳ್ಳು ದಾಖಲೆಗಳ ಆಧಾರದ ಮೇಲೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಅಳತೆಯನ್ನು ಸಹ ನಾನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು

ಹಾಜರುಪಡಿಸಿರುವ ನಿಡಿ 1 ರ ಕ್ರಯಪತ್ರದಲ್ಲಿ ತೋರಿಸಿರುವ ಅಳತೆಗೂ ಹೆಚ್ಚು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ 5 ರಲ್ಲಿ ಇರುವ ಸಹಿಯು ರಸೂಲ್ ಖಾನ್ ರವರ ಸಹಿ ಅಲ್ಲ ಎಂದರೆ ಸರಿಯಲ್ಲ.

ನಿಡಿ 5 ರಲ್ಲಿರುವ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಲು ತೊಂದರೆ ಇಲ್ಲ. ನನ್ನ ತಂದೆ ನ್ಯಾಯಾಲಯಕ್ಕೆ ಬಂದು ವಿಚಾರಣೆ ನೀಡಿದರೆ ಪ್ರಕರಣಕ್ಕೆ ತೊಂದರೆ ಆಗುತ್ತದೆ ಎಂದು ನಾನೇ ಬಂದು ವಿಚಾರಣೆ ನೀಡುತ್ತಿದ್ದೇನೆ ಎಂದರೆ ನನ್ನ ತಂದೆ ಅಂಗವಿಕಲರಾಗಿರುತ್ತಾರೆ. ನನ್ನ ತಂದೆಗೆ ಓಡಾಡಲು ಆಗುವುದಿಲ್ಲ. ನಿಡಿ 2 ರಲ್ಲಿರುವ ಕರೀಂಸಾಬ್ ರವರ ಸಹಿಗೂ ನಿಡಿ 5 ರಲ್ಲಿರುವ ಕ್ರಯಪತ್ರದಲ್ಲಿರುವ ಸಹಿಗೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ಮೇಲ್ನೋಟಕ್ಕೆ ನಿಡಿ 2 ಮತ್ತು 5 ರಲ್ಲಿರುವ ಕರೀಸಾಬ್ ರವರ ಸಹಿಯ ನಡುವೆ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ನಿಡಿ 2 ಪವರ್ ಆಫ್ ಅಟಾರ್ನಿಯಲ್ಲಿ ನನ್ನ ತಂದೆ ಕರೀಂಸಾಬ್ ರವರ ಸಹಿ ಇರುತ್ತದೆ. ಸಾಕ್ಷಿಯು ತನ್ನ ತಂದೆಯ ಸಹಿ ನೋಡಿ ಗುರುತಿಸಿದ್ದು ಅವುಗಳನ್ನು ನಿಡಿ 2(ಎ) ರಿಂದ 2(ಡಿ) ಎಂದು ಗುರುತಿಸಲಾಯಿತು. ವಾದಿಯ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನಾನು ಪಂಚಾಯಿತಿಯವರ ಜೊತೆ ಶಾಮೀಲಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

sd/-

2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.